## ಪ್ರವಾಹ, ಭೂಕುಸಿತ ಪರಿಸ್ಥಿತಿ ಎದುರಿಸಲು 'ಸರ್ಚ್'ನಲ್ಲಿ ಸಾಥ್ ನೀಡಲಿದೆ ಎಐ

# ಎನ್ಐಟಿಕೆ ಸಂಶೋಧನೆಗೆ ನೊಮ್ಯಾಡ್‌ನ ಬಲ

**ಮಂಗಳೂರು:** ವಿಶ್ವವೇ ತಾಂತ್ರಿಕ ಜಗತ್ತಿಗೆ ತೆರೆದುಕೊಂಡಿರುವ ಪ್ರಸ್ತತ ಕಾಲದಲ್ಲಿ ಎಲ್ಲೆಡೆ ಈಗ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಭರ್ಜರಿ ಸದ್ದು ಮಾಡುತ್ತಿದೆ. ಇದಕ್ಕೆ ಪೂರಕವೆಂಬಂತೆ ಇಲ್ಲಿನ ಸುರತ್ಕಲ್‌ನ ರಾಷ್ಟ್ರೀಯ ತಾಂತ್ರಿಕ ಸಂಸ್ಥೆ ಕರ್ನಾಟಕ ಮಹತ್ವದ ಗೆಜ್ಜೆಯೊಂದನ್ನು ಇಟ್ಟಿದೆ.

**ಶುರುವಾಯ್ತು ನೊಮ್ಯಾಡ್**

ಇದು ನೋಡ್ ಫಾರ್ ಓಪನ್‌ಸೋರ್ಸ್ ಮೊಬೈಲ್ ಎಐ ಡಿಪ್ಲಾಯ್‌ಮೆಂಟ್ (ನೊಮ್ಯಾಡ್) ಹೆಸರಿನ ಎಐ ಸಂಶೋಧನಾ ಕೇಂದ್ರವಾಗಿದ್ದು, ಇದು ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶ ಕಲ್ಪಿಸಿದೆ. ಎನ್ಐಟಿಕೆ ಸಹ ಪ್ರಾಧ್ಯಾಪಕ ಡಾ. ಪೃಥ್ವಿರಾಜ್ ಯು. ಕಲ್ಪನೆ ಇಲ್ಲಿ ಸಾಕಾರವಾಗಿದೆ. »ಪುಟ 4





### ಎಲ್ಲಿ ಸ್ಥಾಪಿಸಲಾಗಿದೆ ಈ 'ನೊಮ್ಯಾಡ್' ಕೇಂದ್ರ?

ಎನ್ಐಟಿಕೆ ಕಡಲ ತೀರದ 'ಸರ್ಚ್' ಸಂಶೋಧನಾ ಕೇಂದ್ರದಲ್ಲಿ ಪುನರ್‌ಬಳಕೆ ಮಾಡಲಾದ ಶಿಪ್ಪಿಂಗ್ ಕಂಟೈನರ್‌ನಲ್ಲಿ 'ನೊಮ್ಯಾಡ್' ಕೇಂದ್ರವನ್ನು ಸ್ಥಾಪಿಸಲಾಗಿದೆ. ಇದು ಸ್ವಯಂ ಆಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಗ್ರಿಡ್, ಸೌರ, 15 ಕೆಡಬ್ಲ್ಯು ಸೌರ- ಬ್ಯಾಟರಿ ಘಟಕ ಮತ್ತು ಯುಪಿಎಸ್ ಹೊಂದಿದ ಡೀಸೆಲ್ ಜನರೇಟರ್‌ನಿಂದ ಇದಕ್ಕೆ ನಿರಂತರವಾಗಿ ಸಿಗುವಂತೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.

### ಹೇಗಿದೆ 'ನೊಮ್ಯಾಡ್' ಎಐ ಕೇಂದ್ರ ವಿನ್ಯಾಸ?

ದೂರದ, ಸಂಪರ್ಕರಹಿತ ಪ್ರದೇಶಗಳು ಹಾಗೂ ವಿಪತ್ತು ಪೀಡಿತ ಪರಿಸರಗಳಲ್ಲಿ, ಸಾಮಾನ್ಯ ಕ್ಲೌಡ್ ಸೌಕರ್ಯ ಕೂಡಾ ಲಭ್ಯವಿಲ್ಲದ ಸಂದರ್ಭಗಳಲ್ಲಿ ಬಳಸಲು ಅನುಕೂಲವಾಗುವಂತೆ ನೋಡ್ ಫಾರ್ ಓಪನ್ ಸೋರ್ಸ್ ಮೊಬೈಲ್ ಎಐ ಡಿಪ್ಲಾಯ್‌ಮೆಂಟ್ ವಿನ್ಯಾಸಗೊಂಡಿದ್ದು, ಇದೀಗ ವಿದ್ಯಾರ್ಥಿಗಳ ಆಕರ್ಷಣೆಯ ಕೇಂದ್ರವಾಗಿ ಬದಲಾಗಿದೆ.

Hosa Digantha, Date : 12/04/2026 , p.01